ಸಾವನ್ನು ಕಲ್ಪಿಸಿಕೊಂಡಿದ್ದೆನಲ್ಲಾ ಎನಿಸಿ ಅವನ ಮನಸ್ಸೆಲ್ಲ ಕದಡಿಹೋಯಿತು. ಆದರೂ ಈ ಆಧುನಿಕ ಕಾಲ ಮತ್ತು ಬದುಕಿನ ಅವಸ್ಥಾಂತರಗಳ ನೆಲೆಯಲ್ಲಿ ತಕ್ಷಣವೇ ಆ ನೆನಪ ಅಳಿಸಿ ಅದರ ಮೇಲೆ ಇನ್ನೊಂದ ತಂದುಕೊಂಡೆ. ರಾಜಿ ತುಟಿ ಸವರಿಕೊಂಡು, ಇದ್ದೇ ಇರ್ತದೆ ಎಲ್ಲರಿಗೂ ಬೇಸರ, ವಿಪರ್ಯಾಸ ಅಂದರೆ ನಾವು ಯಾವಾಗ ಹೇಗೆ ಇರಬೇಕೋ ಹಾಗೆ ಇರೋದಿಕ್ಕೆ ಆಗೊದೇ ಇಲ್ಲ' ಎಂದು ಉಗುರನ್ನು ಕಡಿದುಕೊಂಡಳು.

ಇವನು ಸುಧಾರಿಸಿಕೊಂಡು 'ನಾನು ಯಾವತ್ತೂ ಕೂಡ ಪ್ರೇಮಹಂತಕ ಅಲ್ಲ ಅನಿಸ್ತಿದ್ರೂ ಇನ್ನೊಂದು ನೆಲೆಯಿಂದ ಅಂತಹದಕ್ಕೆಲ್ಲ, ನನ್ನ ವರ್ತನೆಗಳೂ ಇರಬಲ್ಲವೆನೋ ಎಂದು ಅನುಮಾನ, ಇತ್ತ ಹೆಣ್ತನವನ್ನು ತಂದುಕೊಂಡು ಗಂಡ್ತನವನ್ನು ಉಳಿಸಿಕೊಂಡು ಪ್ರೇಮಿಸಲು ನನಗೆ ಬರುವುದಿಲ್ಲವಲ್ಲಾ ಎಂದು ಎಷ್ಟು ಬಾರಿ ಸಂಕಟಪಟ್ಟಿದ್ದೇನೆ ಗೊತ್ತಾ, ಭಿನ್ನ ಮನಸ್ಥಿತಿಯ ದೇಹ ಪ್ರವೃತ್ತಿಗಳೆರಡೂ ಏಕತೆಯ ನೆಲೆಗೆ ತಲುಪಿದಾಗ ಮಾತ್ರವೇ ನಿಜವಾದ ಪ್ರೇಮ ಹುಟ್ಟಲು ಸಾಧ್ಯ ಎನಿಸಿ ನಾನು ಎಲ್ಲೆಲ್ಲೋ ಇದನ್ನೆಲ್ಲ ನಿರೀಕ್ಷಿಸಿದೆ. ಆದರೂ ಯಾವುದೂ ಸಾಧ್ಯವಾಗಲಿಲ್ಲ. ನನ್ನ ಸೋಲುಗಳ ಹೊರತಾಗಿ' ಎಂದು ಅವಳೆಡೆಗೆ ತಿರುಗಿದ. ರಾಜಿಗೆ ಇವನ ಭಾವುಕವಾದ ಮಾತುಗಳು, ಬೇಸರ ತರಿಸುವ, ಸವಿಯಿಲ್ಲದ ವರ್ತನೆಗಳು ಸರಿಕಾಣದೆ 'ಪ್ರೇಮ ಅನ್ನೋದು ದೈವ ಅನ್ನೋ ರೀತಿ ರೊಮ್ಯಾಂಟಿಕ್ ಆಗಿ ಯಾಕೆ ಕಾಣಬೇಕು, ಸಹಜವಾಗಿ ಸರಳವಾಗಿ ಸತ್ಯವಾಗಿ ಇದ್ದರೆ ಅಷ್ಟೇ ಸಾಕು. ಇಂಥಲ್ಲೆಲ್ಲ ನಿಮ್ಮನ್ನು ನೀವೇ ಅತಿಯಾಗಿ ಪ್ರೇಮಿಸಿಕೊಳ್ತೀರಿ. ಹಾಗೆನೇ ಪ್ರೇಮ ಅನ್ನೊ ನೆರಳನ್ನು ಹಿಡಿಯಲು ತೊಡಗ್ತೀರಿ. ಪ್ರೇಮವೇ ನಿಮ್ಮನ್ನು ಮೆಚ್ಚುವಂತಾಗಬೇಕು. ಸುಮ್ಮ ಸುಮ್ಮನೆ ಹೀಗೆಲ್ಲ ನೀವು ಒಳಗುದಿಪಡೋದನ್ನು ನೋಡಿದರೆ ನನಗೆ ಪಾಪ ಅನ್ನಿಸುತ್ತೆ' ಎಂದು ಬಿಗುವಾಗಿ ಹೇಳಿ 'ನನಗೆ ಗೊತ್ತು ನೀವು ಯಾಕೆ ಇವತ್ತು ಇರಿ ಎಂದಿರಿ ಎಂಬುದು. ನಿಮಗೆ ಒಂದು ಬಗೆಯಲ್ಲಿ ಸಮಾಧಾನ ಹೇಳುವ ಅಂತಲೇ ನನಗೂ ಮನಸ್ಸಿತ್ತು. ಆದರೆ ವಿಚಿತ್ರ ನೋಡಿ. ಈಗ ಯಾರು ಯಾರಿಗೆ ಸಮಾಧಾನ ಹೇಳಬೇಕೋ ಗೊತ್ತಾಗ್ತಾ ಇಲ್ಲ' ಎಂದು ಮೇ ಫ್ಲವರ್ ಮರದ ಪಕ್ಕದ ಆಲದ ಮರದ ಕಡೆಗೆ ಕಣ್ಣು ಹಾಯಿಸಿ ಅದರ ತುಂಬ ಹಣ್ಣು ತಿನ್ನಲು ಸಡಗರಪಡುತ್ತಿದ್ದ ಗೊರವಂಕಗಳನ್ನು ದಿಟ್ಟಿಸಿದಳು.

ಇವನೊಳಗೆ ಇಂಚಿಂಚಿಗೂ ಇದ್ದ ವಿಷಾದ ಗರಿಗೆದರಿ ಹಾರಾಡಿ ನಾಳೆ ಬರುತ್ತೇನೆ ಎಂದು ಹೇಳಿದ. ಆ ದುಃಖವು ಈಗ ಬಂದು. ಒಹ್! ನಾನಿಲ್ಲೂ ಇವಳೆದುರು ಅಧೀರತೆಯಿಂದ, ತನ್ನೊಳಗಿನ ಸೋನೆಮಳೆಯ ಚಿಂತೆಯ ಸೆರೆಯಿಂದ ಸೋಲುತ್ತಿದ್ದೇನೆ ಎನಿಸಿದಂತಾಗಿ ಬೆವೆತು ಉಸಿರಾಟದ ಲಯಬದ್ಧ ಏರಿಳಿತ ತಪ್ಪಿ ತನ್ನ ಅಂತರಂಗದ ನೆನೆಕೆಗಳಾಗಲಿ ಬಯಸುವ ಸಂವೇದನೆಗಳ ಪ್ರತಿಕ್ರಿಯೆಯಾಗಲಿ ಇವೆಲ್ಲ ಅರ್ಥರಹಿತವೇನೋ ಎನಿಸಿ ದಿಕ್ಕು ತಪ್ಪಿದವನಂತೆ ಆದ. ಊರಲ್ಲಿ ಸಾವಿತ್ರಿ ಜೊತೆ ಅದು ಆಗತಾನೆ ಮೊದಲಬಾರಿಗೆ ರತಿಯಾಸೆಯಲಿ ಮಲಗಲು ಹೋಗುವ ಮುನ್ನ ಆಕೆಯ ನಡತೆಯ ಬಗ್ಗೆ ಕೇಳಿದ್ದ ಕತೆಗಳು ನೆನಪಾಗಿ ಆಕೆ ಸೂಳೆ ಎಂದು ಭಾವಿಸಿ ಹಿಂತಿರುಗಿ ಬಂದದಕ್ಕೂ ಲೈಲಾಳನ್ನು ಚುಂಬಿಸಬೇಕೆಂದು ಮಾತ್ರವೇ ಹುಟ್ಟಿದ್ದ ಆಸೆಯಲ್ಲ ಆಕೆ ಮದುವೆಗಾಗಿ ತಲ್ಲಣಿಸುತ್ತಾಳೆಂದು ಸುಳಿವು ಸಿಕ್ಕಿದ ತಕ್ಷಣ ಅವಳಿಂದ ದೂರಾಗುವುದಕ್ಕೂ ಒಟ್ಟಾಗಿಯೇ ನನ್ನಲ್ಲೇ ಎಲ್ಲ ಸೋಲುಗಳ ಕಾರಣ ಇದೆಯೇನೋ ಎನಿಸಿ ಕಸಿವಿಸಿಗೊಂಡು ಅಳುವಂತಾದ. ಆದರೂ ಇಷ್ಟು ವಯಸ್ಸಲ್ಲಿ ರಾಜಿಯ ಎದಿರು ಅಳುವುದೆಂದರೆ ಅವಮಾನ ಎಂದು ಭಾವಿಸಿ 'ರಾಜೀ, ಕೇವಲ ಪ್ರೇಮಕ್ಕೆ ಹಾತೊರೆಯುವಂತಿದ್ದರೆ ನಾನು ಇಷ್ಟೆಲ್ಲ ಒದ್ದಾಡಬೇಕಾಗುತ್ತಿರಲಿಲ್ಲ. ನನ್ನ ಗ್ರಹಿಕೆಯ ಲೋಕಕ್ಕೆ ದಕ್ಕದ ನನಗೆ ಮೀರಿದ ಇನ್ನೂ ಯಾವುದಾವುದೋ ನೆಲೆಗಳಿಂದಾಗಿಯೇ ಒಟ್ಟು ನಾನು ಹೀಗೆ ವರ್ತಿಸುವಂತೆ ಮಾಡಿರಬೇಕು. ಪ್ರೇಮ ಒಂದೇ ಅಂತಿಮ ಅನ್ನೋದಾಗಿದ್ದಿದ್ರೆ ಮನುಷ್ಯನ ವ್ಯವಸ್ಥೆಯೇ ಅಸ್ತವ್ಯಸ್ತವಾಗಿ ಬಿಡುತ್ತಿತ್ತು' ಎನ್ನುತ್ತಾ ತನಗೆ ಅನಿಸಿದ್ದೆಲ್ಲ ಹೇಳಬೇಕು ಅಂದುಕೊಳ್ಳುತ್ತಿರುವಂತೆ ರಾಜಿ